ಇಂದು ದಿ**: 09.03.2026** ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು**.**

ಮುಂದುವರೆದ ಮುಖ್ಯ ವಿಚಾರಣೆ **2** ರಿಂದ **8** ನೇ ಪ್ರತಿವಾದಿಗಳ ಪರಃ ಶ್ರೀ ಎಂ ಎಸ್ ವಕೀಲರಿಂದ

ಮ್ಯುಟೇಶನ್ ರಿಜಿಸ್ಟರ್ ನ ದೃಢೀಕೃತ ನಕಲನ್ನು ಹಾಜರುಪಡಿಸಿದ್ದು, ಅದನ್ನು ನಿಡಿಃ 81 ಎಂದು ಗುರುತಿಸಲಾಯಿತು. 3 ಪಹಣಿ ಪತ್ರಿಕೆಗಳನ್ನು ಹಾಜರುಪಡಿಸಿದ್ದು, ಅವುಗಳನ್ನು ನಿಡಿಃ 82 ರಿಂದ 84 ಎಂದು ಗುರುತಿಸಲಾಯಿತು. ಮ್ಯುಟೇಶನ್ ದೃಢೀಕೃತ ನಕಲನ್ನು ಹಾಜರುಪಡಿಸಿದ್ದು, ಅದನ್ನು ನಿಡಿಃ 85 ಎಂದು ಗುರುತಿಸಲಾಯಿತು. 10 ಪಹಣಿ ಪತ್ರಿಕೆಗಳ ದೃಢೀಕೃತ ನಕಲನ್ನು ಹಾಜರುಪಡಿಸಿದ್ದು, ಅವುಗಳನ್ನು ನಿಡಿಃ 86 ರಿಂದ 95 ಎಂದು ಗುರುತಿಸಲಾಯಿತು. 2 ಪಹಣಿ ಪತ್ರಿಕೆಗಳನ್ನು ಹಾಜರುಪಡಿಸಿದ್ದು, ಅವುಗಳನ್ನು ನಿಡಿಃ 96 ಮತ್ತು 97 ಎಂದು ಗುರುತಿಸಲಾಯಿತು. 2 ಪಹಣಿ ಪತ್ರಿಕೆಗಳ ದೃಢೀಕೃತ ನಕಲನ್ನು ಹಾಜರುಪಡಿಸಿದ್ದು, ಅವುಗಳನ್ನು ನಿಡಿಃ 98 ಮತ್ತು 99 ಎಂದು ಗುರುತಿಸಲಾಯಿತು. 2 ಪಹಣಿ ಪತ್ರಿಕೆಗಳನ್ನು ಹಾಜರುಪಡಿಸಿದ್ದು, ಅವುಗಳನ್ನು ನಿಡಿಃ 100 ಮತ್ತು 101 ಎಂದು ಗುರುತಿಸಲಾಯಿತು. ದಿಃ 24.08.1953 ರ ನೊಂದಣಿಯಾಗದೆ ಇರುವ ಪಾಲು ಪಾರಿಕತ್ ನ್ನು ಹಾಜರುಪಡಿಸಿದ್ದು, ಅದಕ್ಕೆ ಪ್ರತಿವಾದಿ ನಂ. 2(ಎ) ರವರು ದಂಡ ಮತ್ತು ಶುಲ್ಕ ಪಾವತಿ ಮಾಡಿದ್ದರಿಂದ, ಸದರಿ ದಾಖಲೆಯನ್ನು ನಿಡಿಃ 102 ಎಂದು ಗುರುತಿಸಲಾಯಿತು.

ದಿಃ 21.01.1997 ರ ಹಕ್ಕು ನಿವೃತ್ತಿ ಪತ್ರ ಮತ್ತು ದಿಃ 14.04.1993 ರ ಪ್ರಮಾಣ ಪತ್ರವನ್ನು ಹಾಜರುಪಡಿಸಿದ್ದು, ಆದರೆ ಸದರಿ ಹಕ್ಕು ನಿವೃತ್ತಿ ಪತ್ರ ನೊಂದಣಿ ಆಗದ ಕಾರಣ ಮತ್ತು ಸದರಿ ಪ್ರಮಾಣ ಪತ್ರವು ನೋಟರಿಯವರ ಮುಂದೆ ಆದಂತಹ ದಾಖಲೆಯಾಗಿದ್ದು, 2 ರಿಂದ 8 ನೇ ಪ್ರತಿವಾದಿಯ ಪರ ವಕೀಲರು ಸದರಿ ಪ್ರಮಾಣ ಪತ್ರದ ಪ್ರಕಾರ ಯಾವುದೇ ಹಕ್ಕನ್ನು ಕೇಳುತ್ತಿಲ್ಲ ಮತ್ತು ಹಕ್ಕು ನಿವೃತ್ತಿ ಪತ್ರ ನೊಂದಣಿ ಆಗದೇ ಇದ್ದರು ಸಹ ಸದರಿ ದಾಖಲೆಯನ್ನು ನಿಶಾನೆ ಎಂದು ಗುರುತಿಸಬೇಕು ಎಂದು ಮಾನ್ಯ ಸರ್ವೋಚ್ಚ ನ್ಯಾಯಾಲಯದ ನಿರ್ಧರಿತ ಪ್ರಕರಣವಾದ ಸಿವಿಲ್ ಅಪೀಲ್ ನಂ. 3934/2006 ರ ತೀರ್ಪನ್ನು ಆಧರಿಸಿರುತ್ತಾರೆ. ಆದರೆ ಸದರಿ ಮಾನ್ಯ ಸರ್ವೋಚ್ಚ ನ್ಯಾಯಾಲಯದ ನಿರ್ಧರಿತ ಪ್ರಕರಣದಲ್ಲಿ ಪಾಲು ಪಟ್ಟಿಯ ಬಗ್ಗೆ ಇತ್ಯರ್ಥವಾಗಿದ್ದು, ಅಲ್ಲಿ ಹಕ್ಕು ನಿವೃತ್ತಿ ಪತ್ರ ಮತ್ತು ಪ್ರಮಾಣಪತ್ರದ ಬಗ್ಗೆ ಇತ್ಯರ್ಥಪಡಿಸಿ ಅಂತಹ ದಾಖಲೆಗಳನ್ನು ನೊಂದಣಿ ಆಗದೇ ಇದ್ದರು ಸಹ ನಿಶಾನೆ ಎಂದು ಗುರುತಿಸಬಹುದು ಎಂದು ಹೇಳಿಲ್ಲವಾದ ಕಾರಣ, 2 ರಿಂದ 8 ನೇ ಪ್ರತಿವಾದಿಗಳ ಪರ ವಕೀಲರ ಕೋರಿಕೆಯನ್ನು ತಿರಸ್ಕರಿಸಿ, ದಿಃ 21.01.1997 ರ ಹಕ್ಕು ನಿವೃತ್ತಿ ಪತ್ರ ಮತ್ತು ದಿಃ 14.04.1993 ರ ಪ್ರಮಾಣ ಪತ್ರಗಳು ನೊಂದಣಿ ಆಗದ ಕಾರಣ ಅವುಗಳನ್ನು ನಿಶಾನೆಯೆಂದು ಗುರುತಿಸಲು ಬರುವುದಿಲ್ಲವೆಂದು ತೀರ್ಮಾನಿಸಲಾಗಿದೆ.

<u>ಪಾಟೀ ಸವಾಲು ವಾದಿಗಳ ಪರ ವಕೀಲರ ಕೋರಿಕೆಯ ಮೇರೆಗೆ ಮುಂದೂಡಲಾಯಿತು.</u>

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚುಪಡಿಸಿದೆ.)

ಓ.ಹೇ.ಕೇ.ಸ.ಇದೆ

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ., ಹೊಸದುರ್ಗ.